**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

ಸಂಖ್ಯೆ: ಡಿಟಿಇ 01 ಡಿಇಕ್ಯೂ(2) 2011 / 2054 ದಿನಾಂಕ: 26/09/2015

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

**ವಿಷಯ:** ಶ್ರೀ.ಜಿ.ಕಿಶನ್. ದ್ವಿತೀಯ ದರ್ಜೆ ಸಹಾಯಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಹಾಲಿ ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಇವರ ಅನಧಿಕೃತ ಗೈರು ಹಾಜರಿ ಕುರಿತು ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಅನಧಿಕೃತ ಗೈರು ಹಾಜರಿ ನೋಟಿಸ್ ದಿನಾಂಕ: 08/07/2013, 09.10.2013, 15/10/2013.
2. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಹಾಜರಾತಿ ಜೆರಾಕ್ಸ್ ಪ್ರತಿ.
3. ಅಂಚೆಯಿಂದ ವಾಪಸ್ ಬಂದ ಲಕೋಟೆ ದಿನಾಂಕ: 22/04/2013, 20/06/2013.
4. ಶ್ರೀ.ಜಿ.ಕಿಶನ್ ರವರಿಗೆ ಜಾರಿ ಮಾಡಲಾದ ನಿರ್ದೇಶನಾಲಯದ ಜ್ಞಾಪನಾ ದಿನಾಂಕ: 19/04/2013, 03/05/2013, 17/05/2013, 12/06/2013,
5. ಕರ್ನಾಟಕ ಲೋಕಸೇವಾ ಆಯೋಗ ಪತ್ರದ ದಿನಾಂಕ: 06/04/2013, 18/04/2013, 15/06/2013.
6. ದೋಷರೋಪಣ ಪಟ್ಟಿ ದಿನಾಂಕ: 21.02.2014
7. ಪ್ರಜಾವಾಣಿ ಮತ್ತು ವಿಜಯಕರ್ನಾಟಕ ದಿನಪತ್ರಿಕೆಗಳಲ್ಲಿ ನೋಟಿಸ್ ಪಡಿಯಲು ಸೂಚಿಸಿ ಪ್ರಕಟಿಸಿದ ಪ್ರಕಟಣೆಯ ದಿನಾಂಕ: 04.02.2015
8. ವಿಚಾರಣಾಧಿಕಾರಿಗಳನ್ನು ನೇಮಿಸಲಾದ ದಿನಾಂಕ: 20.02.2015.
9. ವಿಚಾರಣಾಧಿಕಾರಿಗಳ ಅಂತಿಮ ವರದಿ ದಿನಾಂಕ: 13.07.2015.
10. 2ನೇ ಕಾರಣ ಕೇಳುವ ನೋಟಿಸ್ ದಿನಾಂಕ: 31.07.2015.

**********

**ಪ್ರಸ್ತಾವನೆ:**

ಶ್ರೀ.ಜಿ.ಕಿಶನ್, ದ್ವಿದಸ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಹಾಲಿ ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಇವರು ನಿರ್ದೇಶನಾಲಯಕ್ಕೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿ ಪಡೆಯಲು ಕಛೇರಿಗೆ ಸಲ್ಲಿಸಿರುವ ಇಲಾಖಾ ಪರೀಕ್ಷೆಯ ಅಕೌಂಟ್ಸ್ ಹೈಯರ್ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಪರಿಶೀಲಿಸಿದಾಗ ಕರ್ನಾಟಕ ಲೋಕಸೇವಾ ಆಯೋಗದ ಕಛೇರಿಯಿಂದ ಬಂದಿರುವ ಪತ್ರದ ಮುಖೇನ ನಕಲಿ ಪ್ರಮಾಣ ಪತ್ರವೆಂದು ಕಂಡು ಬಂದಿರುತ್ತೆ. ತತ್ಸಂಬಂಧವಾಗಿ ಈ ಕಛೇರಿಯ ಹಲವಾರು ಜ್ಞಾಪನ ಮುಖಾಂತರ ಮತ್ತು ಮೌಖಿಕವಾಗಿ ಮೂಲ ಪ್ರಮಾಣ ಪತ್ರವನ್ನು ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು. ತದನಂತರ ದಿನಾಂಕ: 26/03/2013ರಿಂದ ಇದುವರೆವಿಗೂ ದೀರ್ಘಾವಧಿ ಅನಧಿಕೃತ ಗೈರುಹಾಜರಾದ ಹಿನ್ನೆಲೆಯಲ್ಲಿ ಇವರ ವಿರುದ್ಧದ ಅಕೌಂಟ್ಸ್ ಹೈಯರ್ ಇಲಾಖಾ ಪರೀಕ್ಷೆ ತೇರ್ಗಡೆಯಾಗಿರುವ ಬಗ್ಗೆ ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದು, ಮತ್ತು ದಿನಾಂಕ: 26/03/2013ರಿಂದ ಅನಧಿಕೃತ ಗೈರುಹಾಜರಾಗಿರುತ್ತೀರೆಂದು ಆರೋಪಗಳನ್ನು ಹೊರಿಸಿ ದಿನಾಂಕ: 21/02/2014 ರಂದು ನಿಯಮಾನುಸಾರ ದೋಷಾರೋಪಣ ಪಟ್ಟಿಯನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಜಾರಿ ಮಾಡಿ 15 ದಿವಸದೊಳಗಾಗಿ ನಿಮ್ಮ ಪ್ರತಿವಾದದ ಲಿಖಿತ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿತ್ತು. ಆದರೆ, ಸದರಿ ದೋಷಾರೋಪಣಾ ಪಟ್ಟಿಯು **"ಅಡ್ರೆಸ್ಸೀ ಲೆಫ್ಟ್ ರಿಟರ್ನ್ ಟು ಸೆಂಡರ್"** ಎಂಬ ಷರಾದೊಂದಿಗೆ ಅಂಚೆ ಕಛೇರಿಯಿಂದ ವಾಪಸ್ಸು ಬಂದ ನಿಮಿತ್ತ ದಿನಾಂಕ: 04/02/2015ರಂದು ಪ್ರಜಾವಾಣಿ ಮತ್ತು ವಿಜಯಕರ್ನಾಟಕ ದಿನಪತ್ರಿಕೆಗಳಲ್ಲಿ (ಕರ್ನಾಟಕದಾದ್ಯಂತ) ದೋಷಾರೋಪಣಾ ಪಟ್ಟಿಯನ್ನು ಕಛೇರಿಯಲ್ಲಿ ಪಡೆದು ವಿವರಣೆ ಸಲ್ಲಿಸತಕ್ಕದ್ದು ಎಂದು ಪ್ರಚಾರ ಮಾಡಲಾಗಿತ್ತು. ಆದರೂ ಸಹ ಇವರು ಕಛೇರಿಗೆ ಹಾಜರಾಗದೆ ನೋಟೀಸ್ ಸ್ವೀಕರಿಸದೆ ಕರ್ತವ್ಯ ನಿರ್ಲಕ್ಷ್ಯತೆ ತೋರಿದ್ದರಿಂದ ಅವರ ಮೇಲಿನ ಆರೋಪಗಳ ಬಗ್ಗೆ ಶಿಸ್ತು ಪ್ರಾಧಿಕಾರವು ಪೂರ್ಣಾವಧಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಶ್ರೀ.ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳನ್ನಾಗಿ ದಿನಾಂಕ: 20/02/2015ರಲ್ಲಿ ನೇಮಿಸಲಾಯಿತು. ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿ ಅಂತಿಮ ಘಟ್ಟ

ತಲುಪುವ ವೇಳೆಗೆ ಆಪಾದಿತರು ವಕೀಲರ ಮೂಲಕ ತಮ್ಮ ಗೈರುಹಾಜರಿಯನ್ನು ಮಾಫಿ ಮಾಡಿ, ವಿಚಾರಣೆಯಲ್ಲಿ ಭಾಗವಹಿಸಲು ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿದ ಅರ್ಜಿಯನ್ನು ವಿಚಾರಣಾಧಿಕಾರಿಗಳು ಮಾನ್ಯ ಮಾಡಿ ಮುಂದಿನ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಲಾಯಿತು. ಆದರೆ ಆಪಾದಿತರು ನಂತರದ ವಿಚಾರಣೆಗೆ ಭಾಗವಹಿಸದೆ ಗೈರುಹಾಜರಾಗಿರುತ್ತಾರೆ. ಆಪಾದಿತರಿಗೆ ವಿಚಾರಣೆಯಲ್ಲಿ ಭಾಗವಹಿಸಲು ನ್ಯಾಯ ದೃಷ್ಠಿಯಿಂದ ಸಾಕಷ್ಟು ಕಾಲಾವಕಾಶ ನೀಡಿದರೂ ಸಹ ವಿಚಾರಣೆಗೆ ಭಾಗವಹಿಸುವ ಇಂಗಿತವನ್ನು ವ್ಯಕ್ತಪಡಿಸಿರುವುದಿಲ್ಲ. ಮತ್ತು ಗೈರುಹಾಜರಾದ ಬಗ್ಗೆ ಅಥವಾ ಪ್ರಕರಣವನ್ನು ಮುಂದೂಡುವ ಬಗ್ಗೆ ಯಾವ ಮಾಹಿತಿಯನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಸಲ್ಲಿಸಿರುವುದಿಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಿ, ಪ್ರಕರಣವನ್ನು ಪೂರ್ಣಗೊಳಿಸಿ ವರದಿಯನ್ನು ದಿನಾಂಕ: 13/07/2015 ರಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಿದಾಗ ವರದಿಯಲ್ಲಿ "ಅವರ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸಲು ಆಪಾದಿತರು ವಿಚಾರಣೆಯಲ್ಲಿ ಭಾಗವಹಿಸದೆ ಇಲಾಖಾ ವಿಚಾರಣೆ ನಡೆಸಿರುವ ವಿಷಯ ತಿಳಿದಿದ್ದರೂ ಸಹ ಅವರು ವಿಚಾರಣೆಗೆ ಹಾಜರಾಗದೇ ಇರುತ್ತಾರೆ. ಈ ರೀತಿ ಆಪಾದಿತರಿಗೆ ಕಾಲಾವಕಾಶ ನೀಡಿದರೂ ಸಹ ವಿಚಾರಣೆಯಲ್ಲಿ ಅಂತಿಮ ಆದೇಶವಾದ ನಂತರ ಅವರು ನನಗೆ ಕಾಲಾವಕಾಶ ನೀಡಿಲ್ಲವೆಂದು ಹೇಳಲು ಬರುವುದಿಲ್ಲವೆಂದು ಮತ್ತು ಸದರಿಯವರ ಮೇಲಿನ ಆರೋಪಗಳು ರುಜುವಾತಾಗಿದೆ" ಎಂಬ ಅಭಿಪ್ರಾಯದೊಂದಿಗೆ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ವಿಚಾರಣಾ ವರದಿಯನ್ನು ಅಂಗೀಕರಿಸಿ ಏಕೆ ಸೂಕ್ತ ದಂಡನೆ ವಿಧಿಸಬಾರದು ಎಂಬುದರ ಬಗ್ಗೆ 2ನೇ ಕಾರಣ ಕೇಳುವ ನೋಟೀಸನ್ನು ದಿನಾಂಕ: 31.07.2015ರಂದು ಜಾರಿ ಮಾಡಿ ನೋಟಿಸ್ ತಲುಪಿದ 30 ದಿವಸಗಳೊಳಗಾಗಿ ಅವರ ಲಿಖಿತ ಸಮಜಾಯಿಷಿಯನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಆದರೆ, ಸದರಿ 2ನೇ ಕಾರಣ ಕೇಳುವ ನೋಟಿಸನ್ನು ಸ್ವೀಕರಿಸದೆ ದಿನಾಂಕ: 08.08.2015 ರಂದು 'No Such person in this address, Hence Return to Sender' ಎಂಬ ಷರಾದೊಂದಿಗೆ ಅಂಚೆ ಕಛೇರಿಯಿಂದ ವಾಪಸ್ಸಾಗಿರುತ್ತದೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 28(ii) ರಂತೆ ಪ್ರಿನ್ಸಿಪಾಲರು, ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಇವರು ತಮ್ಮ ಸಂಸ್ಥೆಯ ನುರಿತ ಅಧೀನ ಅಧಿಕಾರಿಯೊಬ್ಬರನ್ನು ಸದರಿಯವರ ವಿಳಾಸಕ್ಕೆ ದಿನಾಂಕ: 21/08/2015ರಂದು ಖುದ್ದು ಭೇಟಿ ನೀಡಿ ನೋಟೀಸ್‌ನ್ನು ಮತ್ತು ಇಲಾಖಾ ವಿಚಾರಣಾ ಅಂತಿಮ ವರದಿಯನ್ನು ಆಪಾದಿತರ ಮನೆಯ ಮುಂಬಾಗಿಲಿಗೆ ಅಂಟಿಸಿ ಪಂಚನಾಮೆ ಮಾಡಿಸಿದ್ದರೂ ಸಹ ಇದುವರೆವಿಗೂ ಸದರಿಯವರಿಂದ ಯಾವುದೇ ಲಿಖಿತ ಸಮಾಜಾಯಿಷಿಯು ಕಛೇರಿಗೆ ಸ್ವೀಕೃತವಾಗಿರುವುದಿಲ್ಲ.

ಶ್ರೀ.ಜಿ.ಕಿಶನ್, ದ್ವಿದಸ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಹಾಲಿ ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಆರೋಪಿತರ ವಿರುದ್ಧ ಮಾಡಿದ ಆರೋಪಗಳು ರುಜುವಾತಾಗಿದ್ದರಿಂದ ಈ ಪ್ರಕರಣದಲ್ಲಿ ಆರೋಪಿತರಿಂದ ದುರ್ನಡತೆ ಎಸಗಲ್ಪಟ್ಟಿರುವುದನ್ನು ಯಾವುದೇ ಸಂದೇಹಕ್ಕೆ ಆಸ್ಪದ ಇಲ್ಲದಂತೆ ಖಚಿತವಾಗಿದ್ದು. ಈ ಅಂಶಗಳನ್ನು ಸಮರ್ಥವಾಗಿ ಅಲ್ಲಗಳೆಯುವಂತಹ ಯಾವುದೇ ಅಂಶಗಳನ್ನು ಸಹ ಆರೋಪಿತರು ನಿರೂಪಿಸಿರುವುದಿಲ್ಲ. ವಿಚಾರಣೆಯು ಸಮರ್ಪಕವಾಗಿ ನಡೆದು ಆರೋಪಿತರಿಗೆ ತಮ್ಮ ವಾದವನ್ನು ಮಂಡಿಸಲು ವಿಫುಲ ಅವಕಾಶವನ್ನು ನೀಡಲಾಗಿದ್ದು, ಮತ್ತು ಇವರು ಅನಧಿಕೃತ ಗೈರು ಹಾಜರಿಯ ಹವ್ಯಾಸವನ್ನೇ ಬಳಸಿಕೊಂಡಿರುವುದರಿಂದ ಆರೋಪಿತರು ಯಾವುದೇ ಸಮಜಾಯಿಷಿಯನ್ನು ಮತ್ತು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಮತ್ತು ಎರಡನೇ ಕಾರಣ ಕೇಳಿ ನೀಡಿದ ನೋಟೀಸ್‌ಗೆ ಈವರೆವಿಗೂ ಯಾವುದೇ ಸಮಜಾಯಿಷಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರ ವಿರುದ್ಧದ ವಿಚಾರಣಾ ವರದಿಯನ್ನು ಅಂಗೀಕರಿಸಿ ವಿಚಾರಣಾಧಿಕಾರಿಗಳ ನಿರ್ಣಯವನ್ನು ಒಪ್ಪಿಕೊಂಡ ಶಿಸ್ತು ಪ್ರಾಧಿಕಾರವು ಈ ಮುಂದಿನಂತೆ ಆದೇಶಿಸುತ್ತದೆ.

**ನಿರ್ದೇಶಕರ ಆದೇಶ ಸಂಖ್ಯೆ: ಸಂಖ್ಯೆ: ಡಿಟಿಇ 01 ಡಿಇಕ್ಯೂ(2) 2011 , ಬೆಂಗಳೂರು**
**ದಿನಾಂಕ: 26ನೇ ಸೆಪ್ಟೆಂಬರ್ 2015**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/18/ಸೇಇವಿ/2001, ದಿನಾಂಕ: 14ನೇ ಸೆಪ್ಟೆಂಬರ್ 2001ರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರಿ ನೌಕರನು ಸೇವೆಯಲ್ಲಿರುವಾಗ ಎಸಗುವ ಅಪರಾಧಗಳು ಸಾಬೀತಾದ ಪ್ರಕರಣಗಳಲ್ಲಿ ಆರೋಪಿಗೆ ವಿಧಿಸಬಹುದಾದಂತಹ ದಂಡನೆಗಳ ಬಗ್ಗೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)

Nadavali

ನಿಯಮಗಳು, 1957ರ ನಿಯಮ8(2)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ, ಹಾಲಿ ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಜಿ.ಕಿಶನ್. ದ್ವಿತೀಯ ದರ್ಜೆ ಸಹಾಯಕರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ **ಸರ್ಕಾರಿ ಸೇವೆಯಿಂದ ತೆಗೆದು ಹಾಕಿ** ಆದೇಶಿಸಲಾಗಿದೆ.

**ನಿರ್ದೇಶಕರು**
**ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ,**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

ಇವರಿಗೆ,

1) ಶ್ರೀ.ಜಿ.ಕಿಶನ್, # 180, 1ನೇ ಮಹಡಿ, 8ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಪ್ರಮೋದ್ ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು-39
2) ಶ್ರೀ.ಜಿ.ಕಿಶನ್, ದ್ವಿತೀಯ ದರ್ಜೆ ಸಹಾಯಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ, ಹಾಲಿ ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು. (ಪ್ರಿನ್ಸಿಪಾಲರ ಮುಖಾಂತರ) (ಸದರಿ ಆದೇಶವನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಮುಖಾಂತರ ಜಾರಿ ಮಾಡಿ ವರದಿಯನ್ನು ಈ ಕಛೇರಿಗೆ ಕಳುಹಿಸುವ ಸಲುವಾಗಿ)
3) ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸ ಸೌಧ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1) ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
4) ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
5) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
6) ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8) ಪ್ರಾಂಶುಪಾಲರು, ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು ಇವರು ಸದರಿಯವರನ್ನು **ಸರ್ಕಾರಿ ಸೇವೆಯಿಂದ ತೆಗೆದು ಹಾಕಿರುವ** ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಲು ಸೂಕ್ತ ಕ್ರಮ ಕೈಗೊಂಡು ವರದಿ ಕಳುಹಿಸುವುದು.
9) ನಿರ್ದೇಶನಾಲಯದ ಆಪ್ತ ಶಾಖೆಗೆ.
10) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
11) ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
12) ಇಎಸ್‌ಟಿ(5), ಇಎಸ್‌ಟಿ8(ಬಿ), ಇಎಸ್‌ಟಿ(9) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

Nadavali